ಹೇ ಹೇ ಎಂದು ಪೆದ್ದು ನಗೆ ನಕ್ಕರು. ಆ ಆರು ಜನರಲ್ಲಿ ಕೆಳಗಡೆ ಅವನೊಂದಿಗೆ ಮಾತಾಡಿದ ಹೆಣ್ಣಿಗೆ ''ನೀವು ಹೇಳ್ರೀ ಮೇಡಂ" ಎಂದ.

"ಸರ್ ಇವರು ನಮ್ಮ ಮಾವ. ನನ್ನ ಹೆಸರು ರಜನಿ. ಇವರ ಮಗನನ್ನು ನಾನು ಮದುವೆ ಆಗಿದ್ದೆ" ಅವಳ ಮಾತು ಅರ್ಧಕ್ಕೆ ತಡೆಯುತ್ತಾ, ''ಆಗಿದ್ದೇ ಅಂದರೆ..."

"ಅಂದರೆ, ಈಗ ನಾನು ಡೈವೋರ್ಸ್ ಪಡೆದಿದ್ದೇನೆ. ನನ್ನ ಮಾಜಿಪತಿ ಈಗ ಆರು ತಿಂಗಳಿನಿಂದ ಕಾಣೆ ಆಗಿದ್ದಾರೆ. ಎಲ್ಲಿ ಇದ್ದಾರೆ ಅಂತ ತಿಳಿಯದು. ಡೈವೋರ್ಸ್ ಆದಾಗಿನಿಂದ ನಾನು ಬೇರೆಯೇ ಇದ್ದೇನೆ.''

"ಸರಿ, ಅದು ಬೇರೆ ಕೇಸ್. ಈಗ ಇಲ್ಲಿಗೇಕೆ ಬಂದಿದ್ದೀರಿ...'' ಬರೆದುಕೊಳ್ಳುತ್ತಿದ್ದ ರೈಟರ್ ಕಡೆ ಒಮ್ಮೆ ಚೆಕ್ ಮಾಡಿ ಕೇಳಿದ.

"ನಾನು ಎರಡು ವರ್ಷದಿಂದ ಅವರನ್ನು ನೋಡಿರಲೇ ಇಲ್ಲ. ನನ್ನ ಗಂಡ ಕಾಣೆ ಆದ ಮೇಲಂತೂ ಸಂಬಂಧ ಕಡಿದೇ ಹೋಗಿತ್ತು. ಆದರೆ ಎರಡು ದಿನದ ಹಿಂದೆ ಈ ವಿಶಾಲಾಕ್ಷಮ್ಮ ಫೋನ್ ಮಾಡಿ, ಮಾವ ಕರೆಯುತ್ತಿದ್ದಾರೆ ಮನೆಗೆ ಬಂದು ಹೋಗಬೇಕಂತೆ ಅಂತ ಹೇಳಿದರು. ನನ್ನ ಜೀವನಾಂಶ ನನಗೆ ಇನ್ನೂ ಸಿಕ್ಕಿರಲಿಲ್ಲ. ನನ್ನ ಪತಿ ಕಾಣೆ ಆಗುವ ಮೊದಲು ನನ್ನ ಜೀವನಾಂಶ ಕೊಟ್ಟಿಲ್ಲ ಎಂದು ಕೇಸ್ ಮಾಡ್ತೀನಿ ಅಂದಾಗ ಮಾವ ನಾನೇ ಕೊಡ್ತೀನಿ ಅಂತ ಪ್ರಾಮಿಸ್ ಮಾಡಿದ್ದರು. ಸುಮಾರು ದಿನಗಳಾದರೂ ಏನೂ ಆಗಿರಲಿಲ್ಲ ಅಂತ ಎರಡು ವಾರದ ಹಿಂದೆ ಫೋನ್‌ನಲ್ಲಿ ದಬಾಯಿಸಿದ್ದೆ. ಅದಕ್ಕೇ ಕರೆದಿರಬಹುದು ಅಂದುಕೊಂಡು ಬಂದೆ. ಇಲ್ಲಿ ನೋಡಿದರೆ ಇವತ್ತು..." ಎಂದು ಅಳಲು ಶುರು ಮಾಡಿದಳು. ಅದು ನಾಟಕ ಎಂಬುದು ಎಲ್ಲರಿಗೂ ಗೊತ್ತಾಗುತ್ತಿತ್ತು.

"ಇಲ್ಲಿರುವವರು ಎಲ್ಲ ನಮ್ಮ ಮಾವನ ಬಂಧುಗಳು ಸಾರ್. ಎಲ್ಲರೂ ಎರಡು ಮೂರು ದಿನದ ಹಿಂದೆ ಫೋನ್ ಬಂದಿತ್ತು ಅಂತ ಬಂದಿದ್ದಾರೆ. ಇಲ್ಲಿರುವ ಎಲ್ಲರಿಗೂ ಮಾವನ ಜೊತೆ ಹಣಕಾಸಿನ ಸಂಬಂಧ ಇತ್ತು. ಎಲ್ಲರೂ ಅದನ್ನು ವಾಪಸ್ ಕೊಡ್ತಾರೆ ಅಂತಾನೇ ಬಂದಿದ್ರು..."

''ಸರಿ ಎಲ್ಲ ರಕ್ತ ಸಂಬಂಧಿಗಳು ಬಂದು ಮಾತಾಡಿಕೊಂಡು ಕೊಲೆ ಮಾಡಿಬಿಟ್ರಾ" ಎಂದು ವ್ಯಂಗ್ಯವಾಗಿ ನಗುತ್ತಾ ಕೇಳಿದ ನಾಗರಾಜಯ್ಯ.

"ಸರ್, ಇವರ ಎಲ್ಲ ಸಂಬಂಧಿಗಳು ನನಗೆ ಗೊತ್ತು. ಎಲ್ಲರೂ ಸುಮಾರು ವರ್ಷಗಳಿಂದ ಮಾವನ ಬಳಿ ಮಾತು ಬಿಟ್ಟಿದ್ದರು. ಅವರೇ ಕರೆದರು ಎಂದು ಬಂದೆವು. ಇನ್ನೊಂದು ವಿಚಾರ, ಈ ಸುನೀಲ್ ನನಗೆ ಯಾರು ಎಂದೇ ಗೊತ್ತಿಲ್ಲ. ಹತ್ತು ವರ್ಷ ಈ ಮನೆ ಸೊಸೆ ಆಗಿದ್ದೆ. ಇವನನ್ನು ನೋಡಿಯೇ ಇಲ್ಲ. ಅವನೇನು ನಮ್ಮ ಸಂಬಂಧಿ ಅಲ್ಲ. ಹಾಂ! ಈ ವ್ಯಂಗ್ಯ ಬಿಟ್ಟು ನಿಮ್ಮ ಕೆಲಸ

**"ಇಲ್ಲಿ ಇರುವ ಎಲ್ಲರ ಮೇಲೂ ಸಂಶಯ ಬರುವಂಥದ್ದೇ. ಎಲ್ಲರೂ ನಿನ್ನೆ ರಾತ್ರಿ ಇಲ್ಲಿಗೆ ಬಂದಿದ್ದೀರ, ಎಲ್ಲರೂ ಈ ವ್ಯಕ್ತಿ ಕರೆ ಕಳುಹಿಸಿದ್ದಾನೆ ಎಂದು ಹೇಳುತ್ತಿದ್ದೀರ? ಅದೂ ಕೆಲಸದಾಕೆ ವಿಶಾಲಾಕ್ಷಮ್ಮನ ಮೂಲಕ ಎಲ್ಲರಿಗೂ ಈ ವ್ಯಕ್ತಿಯ ಜೊತೆ ಒಂದಲ್ಲ ಒಂದು ರೀತಿಯ ದುಡ್ಡಿನ ವ್ಯವಹಾರ ಇದೆ. ನೀವೆಲ್ಲ ಅದೇ ಕಾರಣಕ್ಕೆ ಬಂದಿರಬಹುದು..."**